ಪ್ರಾರ್ಥನೆ

ಗಜೇಂದ್ರನ ಪ್ರಾರ್ಥನೆ

ಆತ್ಮಾತ್ಮಜಾಪ್ತಗೃಹವಿತ್ತಜನೇಷು ಸಕ್ತೈ-
ರ್ದುಷ್ಪ್ರಾಪಣಾಯ ಗುಣಸಂಗವಿವರ್ಜಿತಾಯ ।
ಮುಕ್ತಾತ್ಮಭಿಃ ಸ್ವಹೃದಯೇ ಪರಿಭಾವಿತಾಯ
ಜ್ಞಾನಾತ್ಮನೇ ಭಗವತೇ ನಮ ಈಶ್ವರಾಯ ॥ ೧ ॥

ಶರೀರ, ಪುತ್ರರು, ಆಪ್ತರು, ಮನೆ, ಸಂಪತ್ತು, ಸ್ವಜನರು — ಹೀಗೆ ಇವರಲ್ಲಿ ಆಸಕ್ತರಾದ ಜನರಿಗೆ ನಿನ್ನ ಪ್ರಾಪ್ತಿ ಅತ್ಯಂತ ಕಠಿಣವಾಗಿದೆ. ಏಕೆಂದರೆ ನೀನು ಸ್ವತಃ ಗುಣಗಳ ಆಸಕ್ತಿಯಿಂದ ರಹಿತನಾಗಿರುವೆ. ಜೀವನ್ಮುಕ್ತರಾದವರು ತಮ್ಮ ಹೃದಯದಲ್ಲಿ ನಿರಂತರವಾಗಿ ನಿನ್ನನ್ನು ಚಿಂತಿಸುತ್ತಾ ಇರುತ್ತಾರೆ. ಆ ಸರ್ವೈಶ್ವರ್ಯ ಸಂಪನ್ನ ಜ್ಞಾನಸ್ವರೂಪನಾದ ಭಗವಂತನಿಗೆ ನಾನು ನಮಸ್ಕರಿಸುತ್ತೇನೆ.

ಯಂ ಧರ್ಮಕಾಮಾರ್ಥವಿಮುಕ್ತಿಕಾಮಾ
ಭಜಂತ ಇಷ್ಟಾಂ ಗತಿಮಾಪ್ನುವಂತಿ ।
ಕಿಂ ತ್ವಾಶಿಷೋ ರಾತ್ಯಪಿ ದೇಹಮವ್ಯಯಂ
ಕರೋತು ಮೇಽದಭ್ರದಯೋ ವಿಮೋಕ್ಷಣಮ್ ॥ ೨ ॥

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಈ ಪುರುಷಾರ್ಥಗಳ ಕಾಮನೆಯಿಂದ ಮನುಷ್ಯರು ಭಗವಂತನನ್ನು ಭಜಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆದುಕೊಳ್ಳುತ್ತಾರೆ. ಇಷ್ಟುಮಾತ್ರವಲ್ಲ ಪ್ರಸನ್ನನಾದ ಶ್ರೀ ಭಗವಂತನು ಭಕ್ತರಿಗೆ ಇತರ ಅನೇಕ ವಿಧವಾದ ಸುಖಗಳನ್ನೂ, ನಾಶರಹಿತವಾದ ದಿವ್ಯಶರೀರವನ್ನೂ ದಯಪಾಲಿಸುತ್ತಾನೆ. ಅಂತಹ ಪರಮ ದಯಾಳುವಾದ ಪರಮಾತ್ಮನು ಈ ಮೊಸಳೆಯಿಂದ ನನ್ನನ್ನು ಬಿಡುಗಡೆಮಾಡಲಿ.

ತಮಕ್ಷರಂ ಬ್ರಹ್ಮಪರಂ ಪರೇಶ-
ಮವ್ಯಕ್ತಮಾಧ್ಯಾತ್ಮಿಕಯೋಗಗಮ್ಯಮ್ ।

ಅತೀಂದ್ರಿಯಂ ಸೂಕ್ಷ್ಮಮಿವಾತಿದೂರ-
ಮನಂತಮಾದ್ಯಂ ಪರಿಪೂರ್ಣಮೀಡೇ ॥

ಅವಿನಾಶಿಯೂ, ಸರ್ವಶಕ್ತಿ ಸಂಪನ್ನನೂ, ಅವ್ಯಕ್ತನೂ, ಇಂದ್ರಿಯಾತೀತನೂ, ಅತ್ಯಂತ ಸೂಕ್ಷ್ಮನೂ ಆದವನು ಅತ್ಯಂತ ಹತ್ತಿರವಿದ್ದರೂ ಬಹಳ ದೂರನೆಂದು ಭಾಸವಾಗುವವನೂ, ಆಧ್ಯಾತ್ಮಿಕ ಯೋಗ ಅರ್ಥಾತ್ ಜ್ಞಾನಯೋಗ-ಭಕ್ತಿಯೋಗದಿಂದ ದೊರೆಯುವಂತಹವನೂ ಆದ ಆ ಆದಿಪುರುಷ ಅನಂತ, ಪರಿಪೂರ್ಣ ಪರಬ್ರಹ್ಮ ಪರಮಾತ್ಮನನ್ನು ನಾನು ಸ್ತುತಿಸುತ್ತೇನೆ.

— ಶ್ರೀಮದ್ಭಾಗವತಮ್

ಸೂಕ್ತಿಪ್ರಭ — ಕನ್ನಡ ಸೂಕ್ತಿಗಳು

ಬಲ್ಲೆನೆಂಬಾ ಮಾತು । ಎಲ್ಲವೂ ಹುಸಿ ನೋಡ
ಬಲ್ಲರೆ ಬಲ್ಲೆನೆನಬೇಡ – ಸುಮ್ಮನಿರ
ಬಲ್ಲರೆ ಬಲ್ಲ ಸರ್ವಜ್ಞ ॥ — ಸರ್ವಜ್ಞ

ನಮ್ಮ ನಿತ್ಯದ ಹೊಟ್ಟೆಪಾಡು ಸಾಂಸಾರಿಕ ಜಂಜಾಟದಲ್ಲಿ ಇನ್ನೊಬ್ಬರಿಗೆ ಉಪಕರಿಸಲು ನಮಗೆ ಆಗದೆ ಹೋಗಬಹುದು, ಆದರೆ ಇಷ್ಟನ್ನಾದರೂ ಮಾಡಬಹುದು – ಅಪಕಾರ ಮಾಡದಿದ್ದರೆ ಆಯಿತು.

— ಡಾ.ಶಿವರಾಮ ಕಾರಂತ

ಅಂತಃಕರಣವನ್ನು ಅಲುಗಾಡಿಸುವುದು! ಇದೇ ಕಲೆಯ ಕೆಲಸ. ವ್ಯವಹಾರದ ಜಡತೆಯಿಂದ ಜೀವವನ್ನು ಎಬ್ಬಿಸಿ, ಅರಸಿಕತೆಯ ಸೆರೆಯಿಂದ ನರರನ್ನು ಬಿಡಿಸುವುದು ಅದರ ಗಮ್ಯ. — ಟಿ.ಪಿ. ಕೈಲಾಸಂ

ಗಾಳಿಯನು ಗುದ್ದಿದರೆ ಮೈ ನೊಯ್ವುದೊಂದೆ ಫಲ
ಮೂಲಸತ್ತ್ವಮರೆತ ಸಾಹಸಗಳಂತು
ಮೇಳವಿಸೆ ಪೌರುಷಕೆ ದೈವಕೃಪೆಯಂದು ಫಲ
ತಾಳಿ ಬಾಳಾವರೆಗೆ — ಮಂಕುತಿಮ್ಮ

— ಡಿ.ವಿ.ಜಿ.

'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್'

(ಕನ್ನಡನಾಡಿನ ವಿದ್ಯಾಭ್ಯಾಸ ಮಾಡದ ಜನರೂ ಕೂಡ ಕಾವ್ಯ ಪ್ರಯೋಗ ಮಾಡುವುದರಲ್ಲಿ ಪರಿಣತರು.)

— ಕವಿರಾಜಮಾರ್ಗ (ಕ್ರಿ.ಶ.೮೫೦ರ ಕೃತಿ)